ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೆರಡನೆಯ ಅಧಿವೇಶನ
ಶುಕ್ರವಾರ, ದಿನಾಂಕ: 11ನೇ ಡಿಸೆಂಬರ್, 2020

`ಸ್ವಚ್ಛ ಭಾರತ್ (ಗ್ರಾಮೀಣ) ಅಭಿಯಾನ' ಮತ್ತು ಬಯಲು ಬಹಿರ್ದೆಶೆ ಮುಕ್ತ' ಗ್ರಾಮಗಳು

ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು):-

476(554) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸ್ವಚ್ಛ ಭಾರತ್ (ಗ್ರಾಮೀಣ) ಅಭಿಯಾನವನ್ನು ಪ್ರಾರಂಭಿಸುವ ಮುನ್ನ ಕೈಗೊಂಡಿದ್ದ ಒಟ್ಟಾರೆ ಗ್ರಾಮೀಣ ಸ್ವಚ್ಛತೆ ಎಷ್ಟು; ಮತ್ತು ಈ ಅಭಿಯಾನವನ್ನು ಪ್ರಾರಂಭಿಸಿದ ನಂತರ ಇದುವರೆಗೂ ಸಾಧಿಸಲಾಗಿರುವ ಪ್ರಗತಿ ಎಷ್ಟು; (ಜಿಲ್ಲಾವಾರು ಮತ್ತು ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಪ್ರಸ್ತುತ ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಈ ಅಭಿಯಾನ ಅಡಿಯಲ್ಲಿ ದಿನಾಂಕ:02.11.2020ರಂತೆ ಎಷ್ಟು ಮನೆಗಳಿಗೆ ಶೌಚಾಲಯ ನಿರ್ಮಿಸಿಕೊಡಲಾಗಿದೆ;

(ಇ) ರಾಜ್ಯಕ್ಕೆ `ಬಯಲು ಬಹಿರ್ದೆಶೆ ಮುಕ್ತ' ಸ್ವಚ್ಛತೆ ಕಾರ್ಯಕ್ರಮಗಳಲ್ಲಿ ನಿಗದಿಪಡಿಸಿದ ಗುರಿಯೆಷ್ಟು; ಮತ್ತು ಯಾವ ಅವಧಿಯೊಳಗೆ ರಾಜ್ಯದಲ್ಲಿ ಈ ಅಭಿಯಾನದ ಅಡಿ ಶೇ.100ರಷ್ಟು `ಬಯಲು ಬಹಿರ್ದೆಶೆ ಮುಕ್ತ' ಸ್ವಚ್ಛತೆಯನ್ನು ಸಾಧಿಸಲಾಗುವುದು;

(ಈ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಿರ್ಮಿಸಲಾದ ಶೌಚಾಲಯಗಳೆಷ್ಟು; (ಮಾಹಿತಿ ನೀಡುವುದು)

ರಾಜ್ಯದಲ್ಲಿ `ಬಯಲು ಬಹಿರ್ದೆಶೆ ಮುಕ್ತ' ಗ್ರಾಮಗಳೆಂದು ಘೋಷಿಸಿರುವ ಗ್ರಾಮಗಳೆಷ್ಟು;

(ಉ) ರಾಜ್ಯದಲ್ಲಿ `ಬಯಲು ಬಹಿರ್ದೆಶೆ ಮುಕ್ತ' ಗ್ರಾಮಗಳೆಂದು ಘೋಷಿತವಾಗಿರುವ ಗ್ರಾಮಗಳಲ್ಲಿ ಶೌಚಾಲಯ ನಿರ್ಮಾಣದ ಬಗ್ಗೆ ಸಮೀಕ್ಷೆ/ಗಣತಿಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಕೈಗೊಳ್ಳಲಾಗಿದೆಯೇ? (ಸಮೀಕ್ಷೆ/ಗಣತಿಯ ವಿವರವನ್ನು ಜಿಲ್ಲಾವಾರು ಒದಗಿಸುವುದು)